ಪುಸ್ತಕ ಪ್ರೀತಿ

# ಅವಧೂತರ ದರ್ಶನ ಮಾಡಿಸುವ ಕೃತಿ




| | | |
|---|---|---|
| ಲೇಖಕರು | : | ಅನಂತರಾಮು |
| ಪ್ರಕಾಶಕರು | : | ಕಾಮಧೇನು ಪುಸ್ತಕ |
| ಬೆಲೆ | : | ₹ 235 |
| ಪುಟಗಳು | : | 232 |

ಅವಧೂತರೇ ಹಾಗೆ ! ಅವರ ವ್ಯಕ್ತಿತ್ವದ ಆಳ, ಅಗಲ, ಎತ್ತರ ಯಾವುದೂ ನಮ್ಮ ಕಲ್ಪನೆಗೆ ನಿಲುಕುವುದಿಲ್ಲ. ಆಕಾಶದಷ್ಟು ವಿಶಾಲ, ಭೂಮಿಯಷ್ಟು ಭಾರ, ಸಮುದ್ರದಷ್ಟು ಆಳ, ಹಿಮಾಲಯದಷ್ಟು ಎತ್ತರ.....ಇತ್ಯಾದಿ ಯಾವ ವರ್ಣನೆಗಳೂ ಅವರನ್ನು ಸರಿಗಟ್ಟಲಾರವು. ಜಗತ್ತಿನ ಯಾವ ಸಂಗತಿಯೂ ಅವರನ್ನು ಮೈಲಿಗೆಯಾಗಿಸುವುದಿಲ್ಲ; ಅವರ ಸಂಪರ್ಕಕ್ಕೆ ಬಂದ ಯಾವುದೇ ವಸ್ತು ಪವಿತ್ರವಾಗದೇ ಉಳಿಯುವುದಿಲ್ಲ. ಅವರಿಗೆ ನಿರ್ದಿಷ್ಟ ವೇಷಭೂಷಣಗಳಿಲ್ಲ, ನಿಗದಿತ ರೀತಿ-ರಿವಾಜುಗಳಿಲ್ಲ, ಹಸಿವು ಬಾಯಾರಿಕೆಗಳ ಹಂಗಿಲ್ಲ, ನಿದ್ರೆ-ಜಾಗೃತಿಗಳ ಅರಿವಿಲ್ಲ, ಒಟ್ಟಾರೆ ಅವರ ಸ್ಥಿತಿಯನ್ನು ಹೋಲಿಸಲು ಬೇರೆ ಶಬ್ದಗಳಿಲ್ಲ, ಅದನ್ನು ಅವಧೂತ ಸ್ಥಿತಿ ಎಂದೇ ಕರೆಯಬಹುದಷ್ಟೆ.

ಅವರು ದೇವರೊಂದಿಗೆ ನೇರ ಅನುಸಂಧಾನಕಾರರು. ಜಗದ ಜೀವಿಗಳ ಸಕಲ ಸಂಕಷ್ಟವನ್ನೂ ಅರಿಯಬಲ್ಲವರು. ಸಂಸಾರ ಸಾಗರದಲ್ಲಿ ಎಂತಹ ಕಷ್ಟವೇ ಬರಲಿ, ಎಂತಹ ನಷ್ಟವೇ ಇರಲಿ, ಅವರನ್ನು ನಂಬಿದವರನ್ನು ಕೈಬಿಡದೆ ದಡ ಮುಟ್ಟಿಸುವ ಅಂಬಿಗರು. ಭಕ್ತರನ್ನು ತಾಯಿಯಂತೆ ಸಂತೈಸುವ, ತಂದೆಯಂತೆ ಸಲಹುವ, ಮುಗ್ಧ ಮಗುವಿನಂತೆ ಮುದಗೊಳಿಸುವ, ಉಗ್ರನರಸಿಂಹನಂತೆಯೂ ಕಂಡು ಎಚ್ಚರಿಸುವ ಅವರ ಪರಿ ಎಣಿಕೆಗೆ ಮೀರಿದ್ದು.

ಇಂತಹ ಸಾಲಿನಲ್ಲಿ ಬರುವವರು ಪೂಜ್ಯ ಶ್ರೀ ವೆಂಕಟಾಚಲ ಗುರುಗಳು (ಭಕ್ತರ ನಡುವೆ ಶ್ರೀ ಗುರುನಾಥರೆಂದೇ ಖ್ಯಾತಿ). ಚಿಕ್ಕಮಗಳೂರಿನ ಸಖರಾಯಪಟ್ಟಣದಲ್ಲಿ ನೆಪಮಾತ್ರಕ್ಕೆ ವಾಸವಿದ್ದು ಇಡೀ ವಿಶ್ವದ ಸಮಸ್ತ ಭಕ್ತರ ಮನೆಮನೆಗಳಲ್ಲಿ, ಮನಮನಗಳಲ್ಲಿ ನೆಲೆಸಿರುವ ಪೂಜ್ಯರ ಬಗ್ಗೆ ಕೇಳಿದಷ್ಟೂ ಕಡಿಮೆಯೇ!

ಶ್ರೀವೆಂಕಟಾಚಲ ಅವಧೂತರ ಬಗ್ಗೆ ಹೆಚ್ಚಿನ ವಿಷಯ ತಿಳಿಯುವ ನಿಟ್ಟಿನಲ್ಲಿ ಶ್ರೀಅನಂತರಾಮು ಅವರು ರಚಿಸಿರುವ ಗುರುನಾಥರ ಸನ್ನಿಧಿಯಲ್ಲಿ ಪುಸ್ತಕವು ನಮಗೆ ಸಹಾಯ ಒದಗಿಸುತ್ತದೆ. ಇದೇ ಉದ್ದೇಶವೇ ಅವರ ಈ ಕೃತಿಗೆ ಮೂಲ ಕಾರಣ ಎಂಬುದನ್ನು ಸಹ ಇಲ್ಲಿ ಗಮನಿಸಬೇಕು. ಗುರುನಾಥರ ಬಗ್ಗೆ ಜನರು ತಿಳಿಯುವಂತಾಗಬೇಕು, ಅದಕ್ಕಾಗಿ ಒಂದು ಪುಸ್ತಕವನ್ನು ಹೊರತರಬೇಕು ಎಂದು ಎಣಿಸಿದ ಅನಂತರಾಮು ಅವರು ಅದರ ಬೆಲೆಯನ್ನು ನಿರ್ಣಯಿಸುವುದೇ ಇಲ್ಲ. ಪ್ರಕಾಶಕರು ಎಷ್ಟೇ ಹೇಳಿದರೂ, ಈ ಪುಸ್ತಕಕ್ಕೆ ಬೆಲೆಕಟ್ಟುವುದು ಸಾಧ್ಯವೇ ಇಲ್ಲ, ನಮ್ಮ ಕೈಲಾದಷ್ಟೂ ಹೆಚ್ಚು ಪ್ರತಿಗಳನ್ನು ಮುದ್ರಿಸಿ ಹಂಚೋಣ ಎಂದರಂತೆ. ಹಾಗೂ ಹೀಗೂ ವಾದ ಮಾಡಿ ಅವರನ್ನು ಒಪ್ಪಿಸಿ ಪ್ರಕಾಶಕರು ಇದಕ್ಕೊಂದು ಬೆಲೆಯನ್ನು ನಿಗದಿಗೊಳಿಸಿದ್ದಾರೆ. ಓದುಗರು

ಅವರಿಗೆ ನಿರ್ದಿಷ್ಟ ವೇಷಭೂಷಣಗಳಿಲ್ಲ, ನಿಗದಿತ ರೀತಿ-ರಿವಾಜುಗಳಿಲ್ಲ, ಹಸಿವು ಬಾಯಾರಿಕೆಗಳ ಹಂಗಿಲ್ಲ, ನಿದ್ರೆ-ಜಾಗೃತಿಗಳ ಅರಿವಿಲ್ಲ, ಒಟ್ಟಾರೆ ಅವರ ಸ್ಥಿತಿಯನ್ನು ಹೋಲಿಸಲು ಬೇರೆ ಶಬ್ದಗಳಿಲ್ಲ, ಅದನ್ನು ಅವಧೂತ ಸ್ಥಿತಿ ಎಂದೇ ಕರೆಯಬಹುದಷ್ಟೆ



ಬಿ. ಕೆ. ರಂಗನಾಥ
ಬರಹಗಾರ